
‘ದಿ ಹ್ಯೂ ಬ್ರಿಡ್ಜ್’ ಎಂದು ಕರೆಯುವ ಕೆಂಬಣ್ಣದ ಸೇತುವೆ

### ಇಂದಿರಾ ಹೆಸರಿನ ಉದ್ಯಾನ

ನಮ್ಮ ಪ್ರಧಾನಿ ಇಂದಿರಾಗಾಂಧಿ ಅವರ ಹೆಸರಿನಲ್ಲಿ ಹನಾಯ್ ನಗರದ ಮಧ್ಯದಲ್ಲಿ ಒಂದು ಉದ್ಯಾನವಿದೆ. ಅವರು ಪ್ರಧಾನಿಯಾಗಿದ್ದಾಗ ಇಲ್ಲಿಗೆ ಭೇಟಿ ನೀಡಿದ್ದರ ಸವಿನೆನಪಿಗಾಗಿ ಉದ್ಯಾನಕ್ಕೆ ಅವರ ಹೆಸರಿಸಿದ್ದಾರೆ. ಥಾಂಗ್ ಕಾಂಗ್ ಪ್ರದೇಶದಲ್ಲಿರುವ ಈ ಉದ್ಯಾನದ ಒಂದು ಬದಿ ಹೊ ತಾನ್ ಕೊಂಗ್ ಸರೋವರವಿದೆ. ಹತ್ತಿರದಲ್ಲಿಯೇ ರಾಷ್ಟ್ರೀಯ ಸಿನಿಮಾ ಕೇಂದ್ರ ಕೂಡ ಇದೆ.

ವಿಯೆಟ್ ಮಿನ್ ಪಡೆಗಳಿಗೆ ರಷ್ಯಾದಿಂದ ಚೀನಾ ಮೂಲಕ ಸೈನಿಕ ಮತ್ತು ಶಸ್ತ್ರಾಸ್ತ್ರಗಳ ನೆರವು ಸಿಗುತ್ತಿತ್ತು. 1954ರಲ್ಲಿ ವಿಯೆಟ್ ಮಿನ್ ಮತ್ತು ಫ್ರೆಂಚ್ ಪಡೆಗಳ ಯುದ್ಧದಲ್ಲಿ ಫ್ರಾನ್ಸ್ ಸೋತು ವಿಯೆಟ್ನಾಂನಿಂದ ವಾಪಸಾಯಿತು. ಆಗ ಫ್ರಾನ್ಸ್‌ನಿಂದ ವಿಯೆಟ್ನಾಂ ಜೊತೆಗೆ ಕಾಂಬೋಡಿಯ ಮತ್ತು ಲಾವೋಸ್ ಕೂಡ ಸ್ವತಂತ್ರಗೊಂಡವು. ಆಗ ಆದ ಒಪ್ಪಂದದ ಪ್ರಕಾರ, ಉತ್ತರ ಮತ್ತು ದಕ್ಷಿಣ ವಿಯೆಟ್ನಾಂಗಳೆಂದು ದೇಶವನ್ನು ಇಬ್ಭಾಗ ಮಾಡಲಾಯಿತು. ಉತ್ತರ ವಿಯೆಟ್ನಾಂನಲ್ಲಿ ಹೊ ಚಿ ಮಿನ್ ಅಧ್ಯಕ್ಷತೆಯ ಕಮ್ಯುನಿಸ್ಟ್ ಸರ್ಕಾರ ಅಸ್ತಿತ್ವಕ್ಕೆ ಬಂದರೆ, ಅಮೆರಿಕ ಬೆಂಬಲದಿಂದ ಡಿಯೆಮ್, ದಕ್ಷಿಣ ವಿಯೆಟ್ನಾಂ ಅನ್ನು ‘ರಿಪಬ್ಲಿಕ್ ಆಫ್ ವಿಯೆಟ್ನಾಂ’ ಎಂದು ಘೋಷಿಸಿದರು.

ಹನಾಯ್ ಎಂದರೆ ನದಿಗಳ ನಡುವೆ ರೂಪುಗೊಂಡ ನಗರ. ಕೆಂಪು ನದಿಯ (ಸಾಂಗ್ ಹಾಂಗ್) ಸೆರಗಿನಲ್ಲಿ ರೂಪುಗೊಂಡ ಈ ನಗರ ತಗ್ಗು ಪ್ರದೇಶದಲ್ಲಿದೆ. ಸುತ್ತಮುತ್ತಲಿನ ಹಲವಾರು ನದಿಗಳು ನಗರದ ನಡುವೆ ಸರೋವರಗಳನ್ನು ಸೃಷ್ಟಿಸಿರುವುದರಿಂದ ಇದಕ್ಕೆ 1802ರಲ್ಲಿ ಅರಸ ಟು ಡುಕ್, ‘ಹನಾಯ್’ (‘ಹ’ ಅಂದರೆ ನದಿ, ‘ನಾಯ್’ ಅಂದರೆ ಒಳಗಡೆ) ಎಂಬ ಹೆಸರಿಟ್ಟ. ಇಂದು ಮೂರು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿರುವ ಹನಾಯ್‌ನಲ್ಲಿ ಕೃಷಿ ಭೂಮಿ, ಐತಿಹಾಸಿಕ ಸ್ಮಾರಕಗಳು, ಸರೋವರಗಳು, ನದಿಗಳು, ದೇವಾಲಯಗಳು, ವಸ್ತು ಸಂಗ್ರಹಾಲಯ, ಸಾರಿಗೆ ಸಂಪರ್ಕ, ವಿಶ್ವವಿದ್ಯಾಲಯಗಳು, ಮಾಲ್‌ಗಳು, ಉದ್ಯಾನವನ... ಎಲ್ಲವನ್ನೂ ಕಾಣಬಹುದು.

### ರೈಲು-ರಸ್ತೆ ಯುಗಳದ ‘ಬಿಯನ್’

ಯುದ್ಧದಲ್ಲಿ ಅಮೆರಿಕನ್ನರ ಬಾಂಬ್ ದಾಳಿಗೆ ಹನಾಯ್ ನಗರದ ಸಾಕಷ್ಟು ಭಾಗ ನಾಶವಾಯಿತು. ನೂರಾರು ಮಂದಿ ನಾಗರಿಕರು ಸಾವಿಗೀಡಾದರು. ಆ ಸಂದರ್ಭದಲ್ಲಿ ಅಮೆರಿಕನ್ನರ ದಾಳಿಯಲ್ಲಿ ಪ್ರಮುಖ ಗುರಿಯಾಗಿದ್ದದ್ದು 1682 ಮೀ. ಉದ್ದದ ರೈಲು ಹಳಿ ಮತ್ತು ರಸ್ತೆ ಎರಡೂ ಇರುವ ಬಿಯನ್ ಸೇತುವೆ. ಇಲ್ಲಿನ ಹೋನ್ ಕೀಮ್ ಮತ್ತು ಲಾಂಗ್ ಬಿಯೆನ್ ಪ್ರದೇಶಗಳನ್ನು ಸಂಪರ್ಕಿಸುವ ಲಾಂಗ್ ಬಿಯೆನ್ ಸೇತುವೆಯನ್ನು ಪ್ಯಾರಿಸ್‌ನ ಐಫೆಲ್ ಟವರ್ ಮತ್ತು ಅಮೆರಿಕದ ಲಿಬರ್ಟಿ ಪ್ರತಿಮೆಯನ್ನು ವಿನ್ಯಾಸಗೊಳಿಸಿದ ಗುಸ್ತಾವ್ ಐಫೆಲ್ ವಿನ್ಯಾಸಗೊಳಿಸಿದ್ದಾರೆ. ಆಗಿಂದಾಗ್ಗೆ ಅಮೆರಿಕನ್ನರ ಬಾಂಬ್ ದಾಳಿಗೆ ತುತ್ತಾಗುತ್ತಿದ್ದ ಈ ಸೇತುವೆಯನ್ನು ಅಷ್ಟೇ ತ್ವರಿತವಾಗಿ ವಿಯೆಟ್ನಾಮಿಯರು ಸರಿಪಡಿಸುತ್ತಿದ್ದರು. ಯಾವಾಗ ವಿಯೆಟ್ನಾಮಿಯರು ತಾವು ಹಿಡಿದಿಟ್ಟಿದ್ದ ಅಮೆರಿಕನ್ ಸೈನಿಕರನ್ನೇ ಕೆಲಸಗಾರರನ್ನಾಗಿ ಈ ಸೇತುವೆಯ ರಿಪೇರಿಗೆ ಬಳಸತೊಡಗಿದರೋ ಆಗ ಬಾಂಬ್ ದಾಳಿ ನಿಂತಿತು! ವಿಯೆಟ್ನಾಂ ಜನರ ದೃಢತೆ ಮತ್ತು ಆತ್ಮಬಲದ ಸಂಕೇತವಾಗಿ ಈ ಸೇತುವೆಯನ್ನು ನಾವೀಗ ಕಾಣಬಹುದು.

### ಇತಿಹಾಸ, ವರ್ತಮಾನದ ಜುಗಲ್‌ಬಂದಿ

ವಿಯೆಟ್ನಾಂ ರಾಜಧಾನಿ ಹನಾಯ್ ತನ್ನದೊಂದು ಪಾದವನ್ನು ತನ್ನ ಆಕರ್ಷಕ ಇತಿಹಾಸದಲ್ಲಿ ಇರಿಸಿದ್ದರೆ, ಮತ್ತೊಂದು ಪಾದವನ್ನು ಉಜ್ವಲ ಭವಿಷ್ಯದೆಡೆಗೆ ಇಡುತ್ತಾ, ವಿಶ್ವಾಸದಿಂದ ಹೆಜ್ಜೆ ಹಾಕುತ್ತದೆ. ಐವತ್ತು ಲಕ್ಷ ಮೋಟಾರು ಬೈಕುಗಳು ಅಬ್ಬರಿಸುವ ಹಾರ್ನ್‌ಗಳ ಸದ್ದು ಮಾಡುತ್ತಾ ಈ ನಗರವೆಂಬ ರಥವನ್ನು ಎಳೆದೊಯ್ಯುತ್ತಿವೆ. ಫ್ರೆಂಚ್ ಮತ್ತು ಚೀನಿ ಆಳ್ವಿಕೆಯ ಕುರುಹುಗಳಾದ ಐತಿಹಾಸಿಕ ಸ್ಮಾರಕಗಳು ಇತಿಹಾಸ ಪ್ರತಿನಿಧಿಸಿದರೆ, ನೂಡಲ್ಸ್ ತಿನ್ನುತ್ತಲೋ ಅಥವಾ ಬೈಕ್ ಓಡಿಸುತ್ತಲೇ ಸ್ಟ್ರಾ ಮೂಲಕ ದ್ರವಾಹಾರವನ್ನು ಸೇವಿಸುತ್ತಾ



ಸ್ವತಂತ್ರ ವಿಯೆಟ್ನಾಂಗಾಗಿ ಫ್ರೆಂಚರ ವಿರುದ್ಧದ ಹೋರಾಡಿ ಹುತಾತ್ಮರಾದವರ ನೆನಪಿಗಾಗಿ ನಿರ್ಮಿಸಿರುವ ಸ್ಮಾರಕ